# ಸಂಪಾದಕೀಯ

## ಮಾನವ ಸ್ವಭಾವದ ವೈವಿಧ್ಯತೆ

ಈ ಜಗತ್ತಿನಲ್ಲಿ ಅತ್ಯಂತ ಆಶ್ಚರ್ಯಕರವಾದ ಸಂಗತಿಯೆಂದರೆ ಮಾನವರಲ್ಲಿನ ವೈವಿಧ್ಯತೆ. ಸಾಮಾನ್ಯವಾಗಿ ಪ್ರಾಣಿ ಹಾಗೂ ಪಕ್ಷಿ ಪ್ರಪಂಚದಲ್ಲಿ ಒಂದು ಜಾತಿಗೆ ಸೇರಿದವುಗಳಲ್ಲಿ ಒಂದೇ ರೀತಿಯ ನಡತೆ ಕಂಡು ಬರುತ್ತದೆ. ವೈಯಕ್ತಿಕವಾದ ವ್ಯತ್ಯಾಸಗಳು ಬಹಳ ಕಡಮೆಯೆಂದೇ ಹೇಳಬಹುದು. ಒಂದು ಪ್ರಾಣಿ ಅಥವಾ ಪಕ್ಷಿಯು ಒಂದು ಸಂದರ್ಭದಲ್ಲಿ ಹೀಗೆಯೇ ನಡೆದುಕೊಳ್ಳುತ್ತದೆ ಎಂದು ನಿರ್ದಿಷ್ಟವಾಗಿ ಹೇಳಬಹುದು. ಆದರೆ ಮಾನವನನ್ನು ಕುರಿತು ಹಾಗೆ ತೀರ್ಮಾನಿಸಲಾಗದು. ಅದೆಷ್ಟು ರೀತಿಯಲ್ಲಿ ಮನುಷ್ಯ ತನ್ನವರಿಂದ ಭಿನ್ನವಾಗಿದ್ದಾನೆ! ಅಷ್ಟೆ ಅಲ್ಲ, ಅವನು ಬೇಕೆಂತಲೇ ಇಂತಹ ಭಿನ್ನತೆಯನ್ನು ಪೋಷಿಸುತ್ತಾನೆ, ಅದರಲ್ಲಿ ಹೆಮ್ಮೆ ಪಡುತ್ತಾನೆ. ಅದೇ ತನಗೆ ಒಂದು ಪ್ರತ್ಯೇಕತೆಯನ್ನು ನೀಡುತ್ತದೆ ಎಂದು ಭಾವಿಸುತ್ತಾನೆ. ಎಲ್ಲರೊಂದಿಗೆ ಒಂದಾಗಿಬಿಟ್ಟರೆ 'ತಾನು' ಹಾಗೂ ಅದರೊಂದಿಗೆ ಸೇರಿಕೊಂಡಿರುವ 'ತನ್ನತನ' ನಾಶವಾಗುತ್ತವೆ ಎಂದು ಭಯ ಪಡುತ್ತಾನೆ.

ಮಾನವನು ವಿಕಾಸಪಥದಲ್ಲಿ ಇತ್ತೀಚೆಗೆ ರೂಪುಗೊಂಡಿರುವ ಪ್ರಾಣಿಯಾದರೂ ಅವನು ಮಾಡಿದಷ್ಟು ಸಾಧನೆಯನ್ನು ಮತ್ತಾವ ಜೀವಿಯೂ ಸಾಧಿಸಲಿಲ್ಲ. ಇದಕ್ಕೆ ಕಾರಣ ಅವನಿಗಿರುವ ಬುದ್ಧಿಯ ಸಾಮರ್ಥ್ಯ ಹಾಗೂ ತರ್ಕಬದ್ಧವಾಗಿ ವಿಚಾರ ಮಾಡುವ ಸಾಮರ್ಥ್ಯ. ಮಾನವನು ತನ್ನ ಸುತ್ತ ಮುತ್ತಲಿನ ಪ್ರಕೃತಿಯ ಸೊಬಗನ್ನು ಕಂಡು ಕಲೆಯ ಉಪಾಸಕನಾದಾಗಿನಿಂದ ಅವನ ಬದುಕು ಶ್ರೀಮಂತವಾಯಿತು. ಸಂಸ್ಕೃತಿಗಳು ಬೆಳೆದವು. ಭಾಷೆಯ ಬಳಕೆಯಿಂದ ಮಾನವನು ಸಾಹಿತ್ಯದ ಕೃಷಿಯನ್ನು ರೂಢಿಸಿಕೊಂಡಾಗ ಅವನು ಬದುಕಿನಲ್ಲಿ ಬಯಸುವ ಆದರ್ಶಗಳು, ಉತ್ತಮ ವಿಚಾರಗಳು ಬರವಣಿಗೆಯಲ್ಲಿ ಅಭಿವ್ಯಕ್ತಗೊಂಡು ಜೀವನಕ್ಕೆ ಒಂದು ತಾತ್ವಿಕ ನೆಲೆ, ಔನ್ನತ್ಯ ದೊರೆಯಿತು. ಇವನ್ನೆಲ್ಲ ಸಾಧಿಸಿದ ಮಾನವ ಮತ್ತೊಂದು ಪ್ರಮುಖ ಘಟ್ಟವನ್ನು ತಲುಪಿದ. ಅದೇ ಮಾನವನು ತನ್ನ ಆಧ್ಯಾತ್ಮಿಕ ವಿಕಾಸದ ನೆಲೆಯನ್ನು ಕಂಡುಕೊಂಡದ್ದು. ತನ್ನ ನಿಜ ಸ್ವರೂಪವನ್ನು ಕುರಿತು ಮಾನವ ಯೋಚಿಸಲು ಪ್ರಾರಂಭಿಸಿದಾಗ ಅನೇಕ ಸಿದ್ಧಾಂತಗಳು ರೂಪುಗೊಂಡವು. ಈ ಜಗತ್ತು, ಮಾನವನ ಅಸ್ತಿತ್ವ – ಇವುಗಳೆಲ್ಲದರ ಹಿನ್ನೆಲೆಯಲ್ಲಿರುವ ಸತ್ಯವೇನು ಎಂಬ ಅನ್ವೇಷಣೆ ಮನುಷ್ಯನಿಗೆ ಅನೇಕ ಉತ್ತರಗಳನ್ನು ನೀಡಿತು. ಆದರೆ ಈ ಉತ್ತರಗಳು ವಿಭಿನ್ನವಾಗಿವೆ. ಆಯಾ ದೇಶ, ಕಾಲ, ಸಂಸ್ಕೃತಿಗೆ ತಕ್ಕಂತೆ ಅವುಗಳಲ್ಲಿ ನಾನಾ ವ್ಯತ್ಯಾಸಗಳಿವೆ. ಈ ಉತ್ತರಗಳು ಹೊಸ ಆಚರಣೆಗಳಿಗೆ ಎಡೆ ಮಾಡಿಕೊಟ್ಟವು. ಧರ್ಮ–ಅಧರ್ಮಗಳ ಕಲ್ಪನೆ ಹಾಗೂ ಪಾಪ–ಪುಣ್ಯಗಳ ಭೀತಿ ಕೂಡ ಉಂಟುಮಾಡಿದವು.

ಮಾನವನು ಐಹಿಕ ಜಗತ್ತಿನಲ್ಲಿ ಸಾಧಿಸುವುದೆಲ್ಲವನ್ನೂ ಸಾಮಾನ್ಯ ಸ್ತರದಲ್ಲಿ ಸಾಧಿಸಿದ ಬೆಳವಣಿಗೆಯೆಂದೂ ಆತ್ಮೋನ್ನತಿಯ ಅನ್ವೇಷಣೆಯನ್ನು ಊರ್ಧ್ವಮುಖಿ ಸ್ತರದಲ್ಲಿ ನಡೆದ ಬೆಳವಣಿಗೆಯೆಂದೂ ಪ್ರೊ. ಆಲ್ಡಸ್ ಹಕ್ಸ್ಲಿ ಕರೆಯುತ್ತಾರೆ. ಮಾನವನ ಪ್ರಗತಿಯ ಕುರಿತು ಎಷ್ಟೇ ಅನ್ವೇಷಿಸಿದರೂ ಅದು ಅಳೆದು ಮುಗಿಯಲಾಗದಂಥ ವಿಶಾಲ ಕ್ಷೇತ್ರವೆಂದೂ ಅವರು ಅಭಿಪ್ರಾಯಪಟ್ಟಿದ್ದಾರೆ. ಹೊರಗಿನ ಆಕಾರ, ಬಣ್ಣಗಳಲ್ಲಿರುವ ವ್ಯತ್ಯಾಸಗಳಿಗಿಂತ ಮಾನವರ ಮಾನಸಿಕ ಸ್ತರದಲ್ಲಿರುವ ವೈವಿಧ್ಯತೆಗಳು ಎಷ್ಟು ಬಗೆಯವು! ತಿಳಿಗೇಡಿಯಿಂದ ವಿಜ್ಞಾನಿಯವರೆಗೆ, ಕಳ್ಳನಿಂದ ನಿಷ್ಠಾವಂತನಾದ ದೈವಭಕ್ತನವರೆಗೆ, ಕ್ರೂರಿಯಿಂದ ಅನುಕಂಪೆಯುಳ್ಳ ವ್ಯಕ್ತಿಯವರೆಗೆ, ಅಹಂಕಾರವನ್ನೇ ಮೈವೆತ್ತ ವ್ಯಕ್ತಿಯಿಂದ ಅತ್ಯಂತ ನಿರಾಡಂಬರಿಯಾದ ವ್ಯಕ್ತಿಯ ತನಕ, ಲೌಕಿಕದಲ್ಲೇ ಆಸಕ್ತನಾಗಿದ್ದು ಹಣ ಹಾಗೂ ಅದರಿಂದ ದೊರೆಯುವ ಸುಖಸಾಧನಗಳಲ್ಲೇ ಮುಳುಗಿರುವ ವಿಷಯಿಯಿಂದ, ಭವಿಯಿಂದ, ಜಿತೇಂದ್ರಿಯನೂ ಅನುಭಾವಿಯೂ ಆದ ವ್ಯಕ್ತಿಯ ತನಕ – ಅನೇಕ ಪ್ರಕಾರಗಳನ್ನು ನಾವು ಕಾಣುತ್ತೇವೆ. ಇದರೊಂದಿಗೆ ತಿಳುವಳಿಕೆಯಿಂದ ನಡೆದುಕೊಳ್ಳುವ ವ್ಯಕ್ತಿಗಳು ಒಂದೆಡೆಯಾದರೆ ಮಾನಸಿಕ ಒತ್ತಡಗಳಿಂದ ಅಸಹಜವಾಗಿ ವರ್ತಿಸುವ ಮನೋರೋಗಿಗಳ ಗುಂಪೂ ಇದೆಯಲ್ಲವೇ? ಹೀಗೆ ಮನುಷ್ಯನನ್ನು ಅವನ ಶರೀರ, ಮನಸ್ಸು ಹಾಗೂ ಆಧ್ಯಾತ್ಮಿಕತೆಯ ಸಾಧನೆಗಳ ಆಧಾರಗಳ ಮೇಲೆ ಪರಿಶೀಲಿಸಿದರೆ ಕಂಡುಬರುವ ವ್ಯತ್ಯಾಸಗಳು, ವೈವಿಧ್ಯತೆ ಅಗಾಧ ಹಾಗೂ ಇಂತಹ ಅಧ್ಯಯನ ಜಟಿಲವೂ ಆಗುತ್ತಾ ಹೋಗುತ್ತದೆ.

ತನ್ನ ಶಿಕ್ಷಣ ಹಾಗೂ ಪರಿಸರದ ಪ್ರಭಾವಗಳಿಂದ, ತಾನು ಬೆಳೆದ ಸಂಸ್ಕೃತಿಯ ಪರಿಣಾಮದಿಂದ ಮತ್ತು ತನ್ನ ಪ್ರಕೃತಿದತ್ತ ಸ್ವಭಾವದಿಂದ ನಾನಾ ಬಗೆಯ ಹವ್ಯಾಸಗಳನ್ನು ಮಾನವನು ರೂಢಿಸಿಕೊಂಡಿರುತ್ತಾನೆ. ಕೆಲವರು ಕ್ರಿಯಾಶೀಲರಾಗಿರುತ್ತಾರೆ, ನಾನಾ ಬಗೆಯ ಕಲೆಗಳಲ್ಲಿ, ವಿದ್ಯೆಗಳಲ್ಲಿ ಆಸಕ್ತಿ ಹೊಂದಿದ್ದು, ಅವುಗಳಲ್ಲಿ ಪರಿಣತಿ ಹೊಂದಲು ಶ್ರಮಿಸುತ್ತಾರೆ. ಶಿವರಾಮ ಕಾರಂತರ ಸಾಧನೆಯನ್ನು ಇಲ್ಲಿ ಸ್ಮರಿಸಬಹುದು. ಮತ್ತೆ ಕೆಲವರು ಬೇಡದ ಚಟಗಳಿಗೆ ದಾಸರಾಗಿ ತಾವೂ ನರಳುತ್ತಾರೆ, ಮನೆಯವರಿಗೂ ದುಃಖ ತರುತ್ತಾರೆ. ಸಕ್ರಿಯವಾಗಿ ಒಳ್ಳೆಯ ಅಭ್ಯಾಸಗಳನ್ನು ಬೆಳೆಸಿಕೊಳ್ಳುವ ವ್ಯಕ್ತಿಯೇ ಉತ್ತಮ ಚಾರಿತ್ರ್ಯವನ್ನು ಹೊಂದಬಲ್ಲ. ಮನುಷ್ಯ ಸ್ವಾತಂತ್ರ್ಯದ ಕುರಿತು ಎಷ್ಟೇ ಮಾತನಾಡಿದರೂ ಅವನು ತನ್ನ ದೀರ್ಘಕಾಲದ ಅಭ್ಯಾಸಗಳ ದಾಸನಷ್ಟೇ! ಆದ್ದರಿಂದ

ಸಮಾಜದ ಹಾಗೂ ವೈಯಕ್ತಿಕ ಹಿತಕ್ಕೆ ಪೂರಕವಾದ ಅಭ್ಯಾಸಗಳೇ ಶ್ರೇಷ್ಠ ಹಾಗೂ ಅಂತಹ ಅಭ್ಯಾಸವುಳ್ಳ ವ್ಯಕ್ತಿಗಳು ಸಮಾಜದಲ್ಲಿ ಗೌರವಕ್ಕೆ ಪಾತ್ರರಾಗುತ್ತಾರೆ.

ಮನುಷ್ಯನು ಇತರರೊಂದಿಗೆ ಹೇಗೆ ವರ್ತಿಸುತ್ತಾನೆ ಎನ್ನುವುದರ ಮೇಲೆ ಮಾನವಸ್ವಭಾವವನ್ನು ಅಂತರ್ಮುಖಿ ಮತ್ತು ಬಹಿರ್ಮುಖಿ ಎಂದು ಎರಡು ಬಗೆಗಳಾಗಿ ವಿಂಗಡಿಸ ಬಹುದು. ಕೆಲವರು ಸ್ನೇಹಶೀಲರಾಗಿದ್ದು ತಮ್ಮ ಭಾವನೆಗಳನ್ನು ಮುಕ್ತವಾಗಿ ಅಭಿವ್ಯಕ್ತಗೊಳಿಸುತ್ತಾರೆ. ಇಂತಹವರಿಗೆ ಜನರ ಸಂಪರ್ಕವಿರಲೇಬೇಕು, ಇಲ್ಲದಿದ್ದರೆ ಏಕಾಂಗಿತನದಿಂದ ಕೊರಗುತ್ತಾರೆ. ಇತರರೊಂದಿಗೆ ಉತ್ತಮ ಬಾಂಧವ್ಯವನ್ನು ಬೆಳೆಸಿಕೊಂಡು ತನ್ಮೂಲಕ ಜನಾನುರಾಗಿ ವ್ಯಕ್ತಿತ್ವ ಹೊಂದಿರು ತ್ತಾರೆ. ಇವರ ಸಂಭಾಷಣೆಯು ನೇರ ಹಾಗೂ ಸಹಜವಾಗಿರು ತ್ತದೆ. ಇವರೊಂದಿಗೆ ಮಾತನಾಡಲು ಯಾರೂ ಹಿಂಜರಿಯ ಬೇಕಾಗಿಲ್ಲ. ಅಂತರ್ಮುಖಿಗಳು ಒಂಟಿಯಾಗಿರಲು ಬಯಸಿ ಜನರ ಸಂಪರ್ಕ ವ್ಯರ್ಥವೆಂದೋ, ತೊಂದರೆಯೆಂದೋ ಭಾವಿಸುತ್ತಾರೆ. ಹೆಚ್ಚು ಜನರ ಸಂಪರ್ಕವಿರದ ಇವರು ಬಹುತೇಕ ತಮ್ಮ ವೈಯಕ್ತಿಕ ಆಸೆ, ಆಕಾಂಕ್ಷೆಗಳಿಗೆ ಪ್ರಾಧಾನ್ಯತೆ ನೀಡುವವ ರಾಗಿರುತ್ತಾರೆ. ಆಗಿರುತ್ತಾರೆ. ಇವರೊಂದಿಗೆ ಮಾತನಾಡುವುದು ಕಠಿಣ. ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಇವರು ಹಿಂದೇಟು ಹಾಕುವುದರಿಂದ ಸಂವಹನದಲ್ಲಿ ಇವರು ವಿಫಲರು. ನಾನಾ ಸಂಶಯ ಹಾಗೂ ಆತಂಕಗಳಿಂದಲೂ ಇವರು ನರಳುತ್ತಿರುತ್ತಾರೆ. ತಮ್ಮ ಹವ್ಯಾಸಕ್ಕೆ ಇಂತಹವರು ಹೆಚ್ಚು ಸಮಯ ನೀಡುವುದರಿಂದ ಬಹಿರ್ಮುಖಿ ವ್ಯಕ್ತಿಗಿಂತ ಹೆಚ್ಚು ಸಾಧನೆ ಮಾಡಬಲ್ಲರು. ಆದರೆ ಸಮಾಜದೊಂದಿಗೆ ಅಥವಾ ಮನೆಯ ಮಂದಿಯೊಂದಿಗೆ ಸಾಮರಸ್ಯವಿಲ್ಲದ ಇವರಲ್ಲಿ ಗೊಂದಲವೂ ಕಂಡುಬರುತ್ತದೆ.

ಮಾನವನ ಸ್ವಭಾವದಲ್ಲಿ ಇನ್ನೆರಡು ಮುಖಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಒಂದು, ಮಾನವನ ಅಸದೃಶತೆ – ಇದು ಪ್ರತಿ ಮನುಷ್ಯನಿಗೂ ಒಂದು ಬಗೆಯ ತನ್ನತನವನ್ನು, ವೈಯಕ್ತಿಕತೆಯನ್ನು ತಂದು ಕೊಡುತ್ತದೆ. ತನ್ಮೂಲಕ ಅವನು ಬೇರೊಬ್ಬ ವ್ಯಕ್ತಿಯಾಗಲಾರದಂತೆ ಪ್ರತ್ಯೇಕತೆಯ ಭಾವವನ್ನು ಅವನಲ್ಲಿ ಉಂಟುಮಾಡುತ್ತದೆ. 'ನೀನು ಮತ್ತೊಬ್ಬನಂತಿರುವೆ' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದಾಗ ಅದನ್ನು ಹೊಗಳಿಕೆ ಯೆಂದು ಯಾರೂ ಗುರುತಿಸಲಾರರು. ಪ್ರತಿಯೊಬ್ಬರೂ ತಮ್ಮದೇ ಆದ ಸ್ವಂತಿಕೆಯನ್ನು ಹೊಂದಿರಲು ಪ್ರಯತ್ನಿಸುತ್ತಿರುತ್ತಾರೆ. ಇನ್ನೊಂದು, ಮಾನವನ ಸಾಮಾನ್ಯತೆ ಮತ್ತು ಸಹಭಾಗಿತನ. ಎಲ್ಲ ಮಾನವರಿಗಿರುವ ಸಾಮಾನ್ಯ ಲಕ್ಷಣಗಳಿಂದ, ಬಯಕೆ ಗಳಿಂದ ಒಬ್ಬನನ್ನು ಮಾನವನೆಂದು ಗುರುತಿಸುತ್ತೇವೆ. ಅವನು ಇಂತಹ ಸನ್ನಿವೇಶದಲ್ಲಿ ಹೀಗೆ ನಡೆದುಕೊಳ್ಳಬಹುದು ಎಂದು ಊಹಿಸುತ್ತೇವೆ. ಸಹಭಾಗಿತನವಿರುವುದರಿಂದ ಮನುಷ್ಯ ಮತ್ತೊಬ್ಬರ ಭಾವನೆಗಳಿಗೆ ಸ್ಪಂದಿಸುತ್ತಾನೆ. ತನ್ನ ಬಳಿಯಿರುವ ವಸ್ತುಗಳನ್ನು, ವಿಚಾರಗಳನ್ನು ಇತರರೊಂದಿಗೆ ಹಂಚಿಕೊಳ್ಳುತ್ತಾನೆ.

ಮನುಷ್ಯನು ಸಂಘಜೀವಿಯಾದ್ದರಿಂದ ಅವನ ನಡವಳಿಕೆಗಳು ಸಹಜವಾಗಿ ಕ್ರಿಯೆಗಳಾಗಿ ವ್ಯಕ್ತವಾದಾಗ ಪ್ರತಿಕ್ರಿಯೆಗಳನ್ನೂ ಉಂಟುಮಾಡುತ್ತವೆ. ಕೆಲವು ಪ್ರತಿಕ್ರಿಯೆಗಳು ಮಾನವನಿಗೆ ಬೋಧಕವಾಗಿ ಪರಿಣಮಿಸಿ ಅವನನ್ನು ಉತ್ತಮನನ್ನಾಗಿ ಮಾಡು ತ್ತವೆ. ಇನ್ನು ಕೆಲವು ನಿಷೇಧಾತ್ಮಕ ಅನುಭವಗಳು ವ್ಯಕ್ತಿಗಳನ್ನು ದ್ವೇಷ, ಅಸೂಯೆಗಳ ದಾಸರನ್ನಾಗಿ ಮಾಡಿಸುತ್ತವೆ. **ಮನುಷ್ಯ ತನ್ನ ಭಾವನೆಗಳ, ಆಲೋಚನೆಗಳ ಹಾಗೂ ಅಭ್ಯಾಸಗಳ ಮೊತ್ತ.** ಈ ದೃಷ್ಟಿಯಲ್ಲಿ ನೋಡಿದಾಗ ಅವನು ಗಳಿಸುವ ಪ್ರತಿಯೊಂದು ಅನುಭವವೂ ಅವನ ಜೀವನದ ಅವಿಭಾಜ್ಯ ಅಂಗವಾಗಿ ಅವನಲ್ಲಿ ಬದಲಾವಣೆಯನ್ನು ತರುತ್ತಿರುತ್ತದೆ. ಈ ಎಲ್ಲ ಬದಲಾವಣೆಗಳೂ ಮಾನವನನ್ನು ಕ್ರಮೇಣ ಉನ್ನತಿಗೇ ಕೊಂಡೊಯ್ಯುತ್ತವೆ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ನಿರಂತರವಾಗಿ ವಿಕಾಸ ಗೊಳ್ಳುತ್ತಿರುವ ಮಾನವನು ಒಂದು ಸ್ಪ್ರಿಂಗ್ ಇದ್ದಂತೆ. ತನ್ನಲ್ಲಿರುವ ಪೂರ್ಣತೆಯನ್ನು ಅವನು ಸದಾ ಅಭಿವ್ಯಕ್ತಗೊಳಿಸಲು ಪ್ರಯತ್ನಿಸು ತ್ತಿರುತ್ತಾನೆ. ಆದರೆ ಈ ಅಭಿವ್ಯಕ್ತಿಗೆ ಇರುವ ತೊಡರೆಂದರೆ ಅಜ್ಞಾನ. ತಾನು ಶರೀರ ಅಥವಾ ಈ ದೇಹಕ್ಕೆ ಸೀಮಿತನಾದ ವ್ಯಕ್ತಿ ಎಂದು ಎಲ್ಲಿಯವರೆಗೆ ಮಾನವ ಭಾವಿಸುವನೋ ಅಲ್ಲಿಯವರೆಗೆ ಅವನ ನಡತೆಗಳೆಲ್ಲ ಸ್ವಾರ್ಥದಿಂದಲೇ ಪ್ರೇರಿತ ವಾಗಿರುತ್ತವೆ. ಉಳಿದೆಲ್ಲ ಮಾನವರೊಂದಿಗೆ ಆಧ್ಯಾತ್ಮಿಕ ಮಟ್ಟದಲ್ಲಿ ತಾದಾತ್ಮ್ಯವನ್ನು ಸಾಧಿಸಿದ ಮಾನವನು ಮಾತ್ರ ಭೇದದೃಷ್ಟಿಯಿಂದ ಪಾರಾಗಿ ಸಮದರ್ಶಿಯಾಗಬಲ್ಲ. ದೈವೀ ಗುಣಗಳೇ ಅವನ ಸ್ವಭಾವವಾಗಿ ಅವನು ಸಾಧಾರಣ ಮಾನವರಿಗೆ ನಿಲುಕದ ಒಂದು ಹಂತವನ್ನು ತಲುಪಿರುತ್ತಾನೆ. ಸಾಮಾನ್ಯವಾದ ಮಾನವರಿಗೆ ದಾರಿದೀಪವಾಗಬಲ್ಲ ಇಂತಹ ಅಸಾಮಾನ್ಯ ವ್ಯಕ್ತಿಗಳೇ ಯಾವುದೇ ಸಮಾಜವನ್ನು ಪ್ರಗತಿಯತ್ತ ಕೊಂಡೊಯ್ಯುವ, ಮೌಲ್ಯಗಳನ್ನು ಹಿಡಿದಿಡುವ ಸೂತ್ರಧಾರಿಗಳು.

ಸ್ವಭಾವವನ್ನು ಗಮನಿಸಿ ಮನುಷ್ಯರನ್ನು ಮೂರು ಪ್ರಮುಖ ವಿಧಗಳಾಗಿ ವಿಂಗಡಿಸಲಾಗಿದೆ. ಮೂರು ಪ್ರಮುಖ ಗುಣಗಳಾದ ಸತ್ವ, ರಜಸ್ಸು, ಮತ್ತು ತಮಸ್ಸುಗಳ ಆಧಾರದ ಮೇಲೆ ಈ ವಿಭಜನೆ. ಈ ಗುಣಗಳು ಸೇರಿಯೆ ಪ್ರಕೃತಿಯು ರೂಪುಗೊಂಡಿದೆ. ಇವು ತಮ್ಮ ಪರಸ್ಪರ ಸಂಯೋಗದಿಂದಲೂ, ಒಂದು ಗುಣ ಉಳಿದ ಎರಡಕ್ಕಿಂತ ವಿವಿಧ ಪ್ರಮಾಣದಲ್ಲಿ ಅಧಿಕವಾಗಿರುವುದರಿಂದಲೂ ಭೌತ, ಜೈವಿಕ ಮತ್ತು ಸಚೇತನಗಳಾದ ಎಲ್ಲ ಬಗೆಯ ಅಸ್ತಿತ್ವಗಳ ರಚನೆಗಳು, ಗುಣಗಳು ಮತ್ತು ಕ್ರಿಯೆಗಳನ್ನು ನಿರ್ಧರಿಸುತ್ತವೆ. ಪ್ರಕೃತಿಯಿಂದಾಗುವ ಈ ಸೃಷ್ಟಿಕ್ರಿಯೆಯ ಸಾಮಾನ್ಯ ನಿಯಮಕ್ಕೆ ಮಾನವನು ಹೊರತಲ್ಲ. ತ್ರಿಗುಣಗಳೇ ಮಾನವನ ಸ್ವಭಾವದ ನಿರ್ಧಾರಕ ಉಪಾಧಿಗಳೆಂದರೆ ತಪ್ಪಾಗಲಾರದು. ಸತ್ವಪ್ರಧಾನ

ವ್ಯಕ್ತಿಯಲ್ಲಿ ನಿಸ್ವಾರ್ಥತೆ, ನಿವೃತ್ತಿಪರತೆ, ಸ್ನೇಹಭಾವ, ಅನುಕಂಪಗಳಂತಹ ಉತ್ತಮ ಗುಣಗಳಿರುತ್ತವೆ. ರಾಗ-ದ್ವೇಷಗಳನ್ನು ಗೆದ್ದಿರುವ ಇವರು ಸಹನಶೀಲರು. ರಜೋಗುಣಿಗಳು ಸದಾ ಚಟುವಟಿಕೆಯಿಂದ ಕೂಡಿದ್ದು ನಾನಾ ರೀತಿಯ ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ. ಉತ್ತಮವಾದ ಗುಣಗಳೊಂದಿಗೆ ಅಹಂಕಾರದಿಂದ ತನ್ನ ಕೆಲಸ, ತನ್ನ ಸಂಪತ್ತು ಎಂಬ ಅಭಿಮಾನವನ್ನು ಹೊಂದಿರುತ್ತಾರೆ. ಇವರು ತಮ್ಮ ಬಗ್ಗೆ ಹೇಳಿಕೊಳ್ಳಲು ಇಷ್ಟಪಡುತ್ತಾರೆ. ತಮ್ಮ ಹೆಸರು-ಕೀರ್ತಿಗಳನ್ನು ಪ್ರಚಾರ ಮಾಡುತ್ತ ಜನರ ಗಮನ ಸೆಳೆಯಲು ಹವಣಿಸುತ್ತಾರೆ. ತಮೋಗುಣಿಗಳು ಸ್ವಾರ್ಥ ಹಾಗೂ ಪ್ರವೃತ್ತಿಪರ ಲಕ್ಷಣವುಳ್ಳವರು, ಅಲಸಿಗಳು. ಯಾವುದೇ ವಿಧದ ಮೇಲ್ಮೆಯನ್ನು ಸಾಧಿಸುವ ಛಲವಿಲ್ಲದೆ ಭಯ, ದ್ವೇಷಗಳನ್ನು ಬೆಳೆಸಿಕೊಂಡು ತಾವೂ ನರಳುತ್ತಾರೆ, ಮನೆ ಹಾಗೂ ಸಮಾಜದಲ್ಲೂ ತಿರಸ್ಕಾರವನ್ನು ಅನುಭವಿಸುತ್ತಾರೆ.

ಸತ್ವ, ರಜಸ್ಸು ಮತ್ತು ತಮಸ್ಸುಗಳ ಆಧಿಕ್ಯವು ಮನಸ್ಸನ್ನು ಮೂರು ವಿಧವಾಗಿ ವಿಂಗಡಿಸುತ್ತದೆ. ಸತ್ವದ ಆಧಿಕ್ಯವಿದ್ದಾಗ ಮನಸ್ಸು ಶುದ್ಧವಾಗಿರುತ್ತದೆ ಮತ್ತು ಅದರ ಕ್ರಿಯೆಗಳು ವ್ಯಕ್ತಿಗೂ ಸಮಾಜಕ್ಕೂ ಶ್ರೇಯಸ್ಸನ್ನು ಉಂಟುಮಾಡುತ್ತವೆ. ರಜಸ್ಸಿನ ಆಧಿಕ್ಯದಿಂದ ಮಾನಸಿಕ ಕ್ರಿಯೆಗಳು ಕ್ರೋಧ ಅಥವಾ ದ್ವೇಷದ ಹಲವು ಬಗೆಯ ರೂಪಗಳನ್ನು ತಾಳುತ್ತವೆ. ತಮಸ್ಸು ಅಧಿಕವಾದರೆ ಕ್ರಿಯೆಗಳು ಮೌಢ್ಯದ ಹಲವು ಬಗೆಯ ರೂಪಗಳನ್ನು ತಾಳುತ್ತವೆ.

ಆಧುನಿಕ ವಿಜ್ಞಾನದ ಅಭಿಮತದಂತೆ ಒಬ್ಬ ವ್ಯಕ್ತಿಯ ಸ್ವಭಾವವನ್ನು ನಿರ್ಧರಿಸುವುದು ಅವನ ವಂಶ, ಆನುವಂಶಿಕ ಗುಣಗಳು ಹಾಗೂ ವಂಶವಾಹಿಗಳು. ಇದರೊಂದಿಗೆ ಭಾರತೀಯ ಚಿಂತಕರು ಕರ್ಮದ ಪ್ರಭಾವ ಹಾಗೂ ಸಂಸ್ಕಾರಗಳನ್ನೂ ಒಪ್ಪುತ್ತಾರೆ. ಒಬ್ಬ ವ್ಯಕ್ತಿಯ ನಡತೆಯನ್ನು, ಜೀವನವನ್ನು ನಿರ್ಧರಿಸುವುದು ಅವನ ಪ್ರಾರಬ್ಧ ಕರ್ಮ ಹಾಗೂ ಅವನು ಗಳಿಸುವ ಅನುಭವಗಳ ಸಂಸ್ಕಾರ ವಿಶೇಷ. ಇದನ್ನು ಬದಲಿಸಲು ನಾನಾ ಕ್ರಿಯೆಗಳನ್ನೂ ಪ್ರಾರ್ಥನಾದಿ ಸಾಧನಗಳನ್ನೂ ಶಾಸ್ತ್ರಗಳು ತಿಳಿಸುತ್ತವೆ. ಏನೇ ಆಗಲಿ, ಸತ್ಕ್ರಿಯೆಗಳಿಂದ ಉತ್ತಮ ಸಂಸ್ಕಾರಗಳನ್ನು ರೂಢಿಸಿಕೊಂಡು, ಭಗವಂತನ ಕೃಪೆಯಿಂದ ಪ್ರಾರಬ್ಧಕರ್ಮದ ಆಘಾತಗಳಿಂದ ತಪ್ಪಿಸಿಕೊಳ್ಳಬಹುದು ಎಂಬ ಭರವಸೆಯನ್ನು ಹಿಂದೂ ಧರ್ಮ ನೀಡುತ್ತದೆ.

ಭಗವದ್ಗೀತೆಯು ಮಾನವನ ಆಧ್ಯಾತ್ಮಿಕ ಪ್ರವೃತ್ತಿಯನ್ನು ಅವಲಂಬಿಸಿ ವರ್ಗೀಕರಣವನ್ನು ಮಾಡುತ್ತದೆ. ಜ್ಞಾನ, ಭಕ್ತಿ ಮತ್ತು ಕರ್ಮ - ಈ ಮೂರು ಮಾರ್ಗಗಳಲ್ಲಿ ಪರಸ್ಪರ ವೈಷಮ್ಯವಿಲ್ಲದಿದ್ದರೂ ವ್ಯಕ್ತಿಯು, ಯಾವುದಕ್ಕೆ ಪ್ರಾಧಾನ್ಯಕೊಟ್ಟು ಅನುಸರಿಸುತ್ತಾನೋ ಅದರಂತೆ ಆಯಾ ವ್ಯಕ್ತಿಯ ಸ್ವಭಾವವಿರುತ್ತದೆ. ಯಾವ ವ್ಯಕ್ತಿಯಲ್ಲಿ ಸಂಕಲ್ಪಶಕ್ತಿಯು ಪ್ರಬಲವಾಗಿರುತ್ತದೆಯೋ ಅವನು ಕರ್ಮಮಾರ್ಗವನ್ನು ಅನುಸರಿಸುತ್ತಾನೆ, ಅವನು ಕರ್ಮಯೋಗಿ. ಭಕ್ತನು ಭಕ್ತಿಮಾರ್ಗವನ್ನು ಅನುಸರಿಸಿದರೆ, ಧ್ಯಾನಾಸಕ್ತನಾದ ಯೋಗಿಯು ಧ್ಯಾನಮಾರ್ಗವನ್ನು ಅನುಸರಿಸುತ್ತಾನೆ. ಆದರೆ ಇವರೆಲ್ಲರೂ ತಮ್ಮ ಮನಸ್ಸನ್ನು ಹಿಡಿತದಲ್ಲಿಡಲು ಪ್ರಯತ್ನಿಸಿ, ಮನಸ್ಸಿನ ಶುದ್ಧೀಕರಣದ ಮೂಲಕ ಮನೋದೈಹಿಕ ಅಂಶಗಳನ್ನು ಮೀರಿ ದೈವತ್ವದೊಡನೆ ಏಕತೆಯನ್ನು ಪಡೆದುಕೊಳ್ಳಬೇಕು. ಇದೇ ಎಲ್ಲ ಮಾನವ ಪ್ರಯತ್ನಗಳ ಗುರಿ ಎಂದು ಭಗವದ್ಗೀತೆ ತಿಳಿಸುತ್ತದೆ. ಸಾಧಕರ ಅರ್ಹತೆ ಹಾಗೂ ಆಧ್ಯಾತ್ಮಿಕ ಮಟ್ಟಗಳಿಗನುಸಾರವಾಗಿ, ಮಾನವಸ್ವಭಾವದಲ್ಲೂ ವೈವಿಧ್ಯಗಳಿವೆ. ಸಾತ್ವಿಕ ಬಲದಿಂದ ಉಂಟಾಗುವ ಚಿತ್ತಶುದ್ಧಿಯಿಂದ ಅಸತ್ಯ, ಕೋಪ, ಹಿಂಸೆ, ಲೋಭ ಮತ್ತು ಇತರ ನೀಚ ಗುಣಗಳನ್ನು ನಿವಾರಿಸಬಹುದು. ಅಂತಹ ಸಾಧಕರು ದೈವೀಸಂಪತ್ತನ್ನು ಹೊಂದಿರುವವರು. ದುರಭಿಮಾನ ಮತ್ತು ಕೋಪ, ಅಹಂಕಾರ ಮತ್ತು ಅಜ್ಞಾನ, ಇನ್ನೂ ಇತರ ಅಧಮ ಪ್ರವೃತ್ತಿಗಳಿಗೆ ವಶರಾದವರು ಆಸುರೀ ಸಂಪತ್ತುಳ್ಳವರು. ಗೀತೆಯು ಮಾನವನ ಶ್ರದ್ಧೆಯನ್ನನುಸರಿಸಿ ಮಾನವಸ್ವಭಾವವನ್ನು ಸಾತ್ವಿಕ, ರಾಜಸ ಹಾಗೂ ತಾಮಸ ಎಂಬುದಾಗಿ ಇನ್ನೊಂದು ರೀತಿಯಲ್ಲೂ ವರ್ಗೀಕರಿಸುತ್ತದೆ. ಒಬ್ಬ ಮನುಷ್ಯನ ಸ್ವರೂಪ ಏನಾಗಿರುವುದೋ ಅದಕ್ಕೆ ಅವನು ಹೊಂದಿರುವ ಶ್ರದ್ಧೆಯೇ ಕಾರಣವೆನ್ನುತ್ತದೆ ಗೀತೆ.

ಮಾನವಸ್ವಭಾವವನ್ನು ಅರಿಯುವುದು, ಬಹು ಸ್ವಾರಸ್ಯಕರವಾದ ವಿಷಯ. ಬಾಹ್ಯ ಸ್ವರೂಪದಿಂದಾಗಲೀ, ಅವನ ಕ್ರಿಯೆಗಳಿಂದಾಗಲೀ ಮಾನವನನ್ನು ಸಂಪೂರ್ಣವಾಗಿ ನಾವು ಅರಿಯಲಾರೆವು. ಏಕೆಂದರೆ ಮೂಲತಃ ಅವನು ಅಂತರ್ಯಾಮಿಯಾಗಿರುವ ಸಚ್ಚಿದಾನಂದಸ್ವರೂಪಿಯಾದ ಚೈತನ್ಯವೇ ಆಗಿದ್ದಾನೆ ಹಾಗೂ ಆ ನೆಲೆಯಲ್ಲಿ ಎಲ್ಲರೊಂದಿಗೆ ಒಂದಾಗಿದ್ದಾನೆ. "ಎಲ್ಲ ಕ್ಷೇತ್ರಗಳಲ್ಲೂ ಇರುವ ಕ್ಷೇತ್ರಜ್ಞನು ನಾನೇ" ಎಂದು ಶ್ರೀಕೃಷ್ಣ ಹೇಳಿರುವಂತೆ, ಈ ಎಲ್ಲ ವಿವಿಧ ಸ್ವಭಾವಗಳನ್ನು ವ್ಯಕ್ತಪಡಿಸುತ್ತಿರುವ ಒಬ್ಬನೇ ಆತ್ಮನನ್ನು ತಿಳಿದರೆ, ಆಗ ಮಾತ್ರ ಮಾನವನ ಅಂತಃಸತ್ವ ತಿಳಿದುಬರುತ್ತದೆ. ಉಳಿದೆಲ್ಲ ವ್ಯತ್ಯಾಸಗಳೂ ತಾತ್ಕಾಲಿಕ ಪ್ರಕ್ರಿಯೆಗಳು, ಅವನ ನಿಜಸ್ವರೂಪವನ್ನು ಮರೆಮಾಡುವ ಅಧ್ಯಾಸಗಳು. ಇವುಗಳನ್ನು ಕಳಚಿಕೊಂಡು ತನ್ನ ನೈಜ ನೆಲೆಯನ್ನು ಅರಸುವುದೇ ಮಾನವನ ಎಲ್ಲ ಕ್ರಿಯೆಗಳ ಹಿಂದಿರುವ ಪ್ರಚೋದಕ ಶಕ್ತಿ. ಇದನ್ನು ಸಾಧಿಸುವ ತನಕ ಅವನು ಅಪೂರ್ಣ, ಅತೃಪ್ತ. ಅವನ ಎಲ್ಲ ಚಡಪಡಿಕೆಯ ಹಿಂದೆ ಈ ಚೈತನ್ಯದ ಅಭಿವ್ಯಕ್ತಿಯನ್ನು ಗುರುತಿಸಿದವರು ಸ್ವಾಮಿ ವಿವೇಕಾನಂದರು. ಇಂತಹ ದೃಷ್ಟಿ ಮಾನವನನ್ನು ಕ್ಷುದ್ರನನ್ನಾಗಿಸದೆ, ಅವನನ್ನು ಪ್ರಕೃತಿಯ ಕೈಗೊಂಬೆಯಾಗಿ ನೋಡದೆ, ಅದರ ಬದಲಿಗೆ ಶಿವನಾಗಿ, ನಾರಾಯಣನನ್ನಾಗಿ ನೋಡುವಂತೆ ಮಾಡುತ್ತದೆ. ಇದು ಮಾನವರಲ್ಲಿರುವ ಎಲ್ಲ ಭೇದಗಳನ್ನು ಅಳಿಸಿಹಾಕಬಲ್ಲ ಸಮ್ಯಕ್ ದೃಷ್ಟಿ, ಸಮದೃಷ್ಟಿ. ಇದು ನಮ್ಮೆಲ್ಲರ ಸಹಜ ಸ್ವಭಾವವಾಗಬೇಕು. ಆಗ ನಾವು ವಿಶ್ವಮಾನವರಾಗುವೆವು, ದಿವ್ಯತೆಯ ಪ್ರತಿಬಿಂಬಗಳಾಗುವೆವು.